ಅ) ಹಾಗಿದ್ದಲ್ಲಿ ಆ ವ್ಯತ್ಯಾಸಗಳಾವುವು ;

ಇ) ಹೊಂಬೇಗೌಡ ನಗರ ಮತ್ತು ರಾಜಾಜಿನಗರದ ವಸತಿ ಗೃಹಗಳ ನಿವಾಸಗಳಿಂದ ಸದರೀ ವ್ಯತ್ಯಾಸಗಳನ್ನು ಸರಿಪಡಿಸುವಂತೆ ಮನವಿಗಳೇನಾದರೂ ಸರ್ಕಾರಕ್ಕೆ ಬಂದಿದೆಯೆ :

ಈ) ಹಾಗಿದ್ದಲ್ಲಿ ಆ ಮನವಿಗಳ ಮೇಲೆ ಕೈಗೊಂಡ ಕ್ರಮಗಳೇನು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ವ್ಯತ್ಯಾಸವಿದೆ.

ಆ) ಪ್ರತಿ ಗುಂಪಿನ ಮನೆಗಳ ಮಾದರಿ ವಿನ್ಯಾಸ (ಟೈಪ್ ಡಿಸೈನ್) ರಚನಾ ವಿನ್ಯಾಸ, (ಸ್ಟ್ರಕ್ಚರಲ್ ಡಿಸೈನ್), ವಿಸ್ತೀರ್ಣ, ಸೌಕರ್ಯ ಇವುಗಳಲ್ಲಿ ವ್ಯತ್ಯಾಸವಿದೆ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಕೃಷ್ಣಾ ನದಿಯ ಏತ ನೀರಾವರಿ ಯೋಜನೆಗಳು

೫೭೬. ಶ್ರೀ ಬಿ. ಎಸ್. ಪಾಟೀಲ್ (ಹೂವಿನ ಹಿಪ್ಪರಗಿ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೃಷ್ಣಾ ನದಿಯ ದಂಡೆಗುಂಟ ವಿಜಾಪುರ ಜಿಲ್ಲೆಯಲ್ಲಿ ಎಷ್ಟು ಏತ ನೀರಾವರಿ ಯೋಜನೆಗಳು ಇರುತ್ತವೆ.

ಆ) ಇದ್ದರೆ ಯಾವ ಯಾವ ಸ್ಥಳದಲ್ಲಿ ಇವೆ,

ಇ) ಪ್ರತಿಯೊಂದು ಯೋಜನೆಯಿಂದ ಎಷ್ಟು ಕ್ಷೇತ್ರಕ್ಕೆ ನೀರಾವರಿ ಸೌಲಭ್ಯವು ದೊರೆಯುತ್ತಿದೆ.

ಈ) ಎಷ್ಟು ಯಾತ ನೀರಾವರಿ ಯೋಜನೆಗಳು ಕೃಷ್ಣಾ ನದಿ ಅಡಿಯಲ್ಲಿ ಆಗಬಹುದು ಅಂತಾ ವ್ಯಾಪಕವಾದ ಯೋಜನೆಯನ್ನೇನಾದರೂ ಸರ್ಕಾರ ತಯಾರಿಸಿದೆಯೇ ? ತಯಾರಿಸಿದ್ದರೆ ಗುರುತಿಸಲಾಗಿರುವ ಸ್ಥಳಗಳಾವುವು. ಇದಕ್ಕೆ ತಗಲುವ ವೆಚ್ಚ ಎಷ್ಟು ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ನೀರಾವರಿ ಮತ್ತು ಲೋಕೋಪಯೋಗಿ ಸಚಿವರು)—

ಅ) ಆ) ಮತ್ತು ಇ) ವಿಜಾಪುರ ಜಿಲ್ಲೆಯಲ್ಲಿ ಕೃಷ್ಣಾನದಿಯ ದಂಡೆಗೆ ೫ ಏತ ನೀರಾವರಿ ಯೋಜನೆಗಳು ಇವೆ. ಅವುಗಳ ವಿವರಗಳು ಈ ರೀತಿ ಇವೆ.

ಕ್ರ. ಸಂ.	ತಾಲ್ಲೂಕು	ಏತ ನೀರಾವರಿ ಯೋಜನೆಯ ಹೆಸರು ಮತ್ತು ಸ್ಥಳ	ಅಚ್ಚುಕಟ್ಟು (ಹೆಕ್ಟೇರ್‌ಗಳಲ್ಲಿ)
೧.	ವಿಜಾಪುರ	ಜಂಬಗಿ	೧೬೨
೨.	ಬಿ. ಬಾಗೇವಾಡಿ	ಬಳೂತಿ	೫೨೨
೩.	ಜಮಖಂಡಿ	ಬಿದರಿ	೧೨೧
೪.	ಜಮಖಂಡಿ	ಹಿರೇಪಡಸಲಗಿ	೪೦೦
೫.	ಮುದ್ದೇಬಿಹಾಳ	ಮಸೂತಿ	೮೧
		ಒಟ್ಟು	೧೩೪೬

ಈ) ವ್ಯಾಪಕವಾದ ಯೋಜನೆಯನ್ನೇನೂ ತಯಾರಿಸಲಾಗಿಲ್ಲ. ಆದರೆ ಈ ಕೆಳಗಿನ ಏತ ನೀರಾವರಿ ಯೋಜನೆಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ.

	ಏತ ನೀರಾವರಿ ಯೋಜನೆಯ ಹೆಸರು	ಅಂದಾಜು ವೆಚ್ಚ (ರೂ. ಲಕ್ಷಗಳಲ್ಲಿ)	ಪ್ರಸಕ್ತ ಹಂತ
೧)	ಹಿಪ್ಪರಗಿ, ಜಮಖಂಡಿ ತಾಲ್ಲೂಕು	೨೦.೯೫	ನಿರ್ಮಾಣಕಾರ್ಯ ಕೈಗೆತ್ತಿಕೊಳ್ಳಲಾಗಿದೆ.
೨)	ತಂಗಳ, ಜಮಖಂಡಿ ತಾಲ್ಲೂಕು	೨೪೯.೦೦	ಅಂದಾಜು ಪಟ್ಟಿ ತಯಾರಿಸಲಾಗುತ್ತಿದೆ.
೩)	ಜಕನೂರು, ಜಮಖಂಡಿ ತಾಲ್ಲೂಕು	೧೨.೦೦	ಅನ್ವೇಷಣಾ ಹಂತದಲ್ಲಿದೆ.
೪)	ನಾಯಂನೇಗಲಿ, ಬಾಗಲಕೋಟೆ ತಾಲ್ಲೂಕು	೧೨೦.೦೦	
೫)	ಯರಝರಿ, ಮುಧೋಳ ತಾಲ್ಲೂಕು	೩೦.೦೦	

ಇದಲ್ಲದೆ ಕೃಷ್ಣಾ ಮೇಲ್ದಂಡೆ ಯೋಜನೆಯ ಆಲಮಟ್ಟಿ ಜಲಾಶಯದ ಹಿನ್ನೀರಿನಿಂದ ಮುಳವಾಡ ಏತ ನೀರಾವರಿ ಯೋಜನೆಯನ್ನು ಮತ್ತು ಆಲಮಟ್ಟಿ ಎಡದಂಡೆ ನಾಲೆಯಿಂದ ಚಿಮ್ಮಲಗಿ ಏತ ನೀರಾವರಿ ಯೋಜನೆಯನ್ನು ಕೈಗೊಳ್ಳಲು ಉದ್ದೇಶಿಸಲಾಗಿದ್ದು ಈ ಯೋಜನೆಗಳು ಅನ್ವೇಷಣಾ ಹಂತದಲ್ಲಿವೆ.

ಅಡಾರಾ ಕಚೇರಿ ನವೀಕರಣ

೬೧೭ ಶ್ರೀ ರಾಮಲಿಂಗರೆಡ್ಡಿ (ಜಯನಗರ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಂಗಳೂರಿನಲ್ಲಿರುವ ಅಡಾರಾ ಕಛೇರಿಯನ್ನು (ಉಚ್ಚ ನ್ಯಾಯಾಲಯದ ಕಟ್ಟಡವನ್ನು ಎಷ್ಟು ವರ್ಷಗಳಿಂದ ದುರಸ್ತಿ ಮಾಡಲಾಗುತ್ತಿದೆ ;

ಆ) ದುರಸ್ತಿ ಕಾಮಗಾರಿ ಕೈಗೊಳ್ಳಲು ಅಂದಾಜು ಮಾಡಿದ ಮೊಬಲಗು ಎಷ್ಟು ; ಹಾಗೂ ೩೧-೩-೧೯೯೦ ರವರೆಗೆ ಖರ್ಚು ಮಾಡಿದ ಮೊತ್ತವೆಷ್ಟು ;

ಇ) ಸದರಿ ಕಟ್ಟಡದಲ್ಲಿ ಯಾವ ಯಾವ ದುರಸ್ತಿ ಕೆಲಸವನ್ನು ಕೈಗೊಳ್ಳಲಾಗಿದೆ ;

ಈ) ದುರಸ್ತಿ ಕಾರ್ಯವನ್ನು ಪೂರ್ತಿಗೊಳಿಸಲು ನಿಗದಿಪಡಿಸಿದ ಸಮಯವೆಷ್ಟು ಹಾಗೂ ಎಂದು ಪೂರ್ತಿಗೊಳಿಸಲಾಗುವುದು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಅಡಾರಾ ಕಚೇರಿ ನವೀಕರಣ : ದುರಸ್ತಿ ಕಾರ್ಯವನ್ನು (ಉಚ್ಚ ನ್ಯಾಯಾಲಯ) ಜನವರಿ ೧೯೮೬ ರಿಂದ ಪ್ರಾರಂಭಿಸಲಾಯಿತು.

ಆ) ಇದಕ್ಕಾಗಿ ಅನುಮೋದಿಸಿದ ಅಂದಾಜು ಮೊತ್ತ ರೂ. ೧೭೫.೦೦ ಲಕ್ಷಗಳು ೩೧-೩-೧೯೯೦ ರವರೆವಿಗೆ ಒಟ್ಟು ರೂ. ೧೭೨.೫೦ ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

ಇ) ಈ ಕೆಳಕಂಡ ನವೀಕರಣ ಕಾರ್ಯಗಳನ್ನು ಕೈಗೊಳ್ಳಲಾಗಿದೆ :—

(೧) ನೆಲಮಹಡಿ ಮತ್ತು ಮೊದಲನೇ ಮಹಡಿಗಳಮಾಳಿಕೆಗಳನ್ನು ತೆಗೆದು ಮತ್ತೆ ಹಾಕುವುದು.

(೨) ಗೋಡೆಗಳ ಗಚ್ಚು : ಗಾರೆಯನ್ನು ತೆಗೆದು ವೈರ್‌ಮೆಷ್ ಉಪಯೋಗಿಸಿ ಮತ್ತೆ ಹಾಕುವುದು

(೩) ಬಾಗಿಲುಗಳ ಕದಗಳನ್ನು ತೆಗೆದು ಬೇರೆ ಹಾಕುವುದು.

(೪) ಸಿಮೆಂಟ್ : ಮೊಸಾಯಿಕ್ ನೆಲಕ್ಕೆ ಪ್ಲೊರೀಂಗ್

(೫) ಅವಶ್ಯವಿರುವ ಕಡೆ ಇಟ್ಟಿಗೆ ಗೋಡೆಗಳನ್ನು ಕಟ್ಟುವುದು.